ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ವಿವರಗಳನ್ನು ತಮಗೆ ಕೊಡುತ್ತೇನೆ. ಈ ರೀತಿ ಐಟಂಗಳಲ್ಲಿ ಒಂದೊಂದು ಡಿವಿಷನ್‌ಗಳಲ್ಲಿ 9 ಜನ ಎ.ಇ.ಇ.ಗಳು. ಇಬ್ಬರು ಇ.ಇ.ಗಳು ಇವರೆಲ್ಲ ಸೇರಿ ಇಷ್ಟೊಂದು ಹಣವನ್ನು ಅವ್ಯವಹಾರ ಮಾಡಿದ್ದಾರೆ.

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದರ ಬಗ್ಗೆ ವರದಿಯನ್ನು ತರಿಸುತ್ತೇನೆ. ಅಂಥದ್ದೇನಾದರೂ ಅವ್ಯವಹಾರಗಳಾಗಿದ್ದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಅಧ್ಯಕ್ಷರ ಮೂಲಕ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನನಗೆ ಕೊಡಿ ಇದರಲ್ಲಿ ಯಾವುದೇ ಅಧಿಕಾರಿಗಳು ಶಾಮೀಲಾಗಿದ್ದರೂ ಸಹ ನಾನು ಅವರನ್ನು ಬಿಡುವುದಿಲ್ಲ. ನಾನು ವರದಿಯನ್ನು ತರಿಸಿ, ತನಿಖೆಯನ್ನು ಮಾಡಿ, ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ವರದಿಯನ್ನು ತರಿಸುತ್ತೀರೋ ಅಥವಾ ತನಿಖೆಯನ್ನು ಮಾಡಿಸುತ್ತೀರೋ ಯಾವಾಗ ತನಿಖೆಯನ್ನು ಮಾಡಿಸುತ್ತೀರಾ?

ಶ್ರೀ ಉಮೇಶ್ ವಿ. ಕತ್ತಿ :— 2-3 ದಿವಸದಲ್ಲಿ ವರದಿಯನ್ನು ತರಿಸುತ್ತೇನೆ. ಅದರಲ್ಲಿ ಅವ್ಯವಹಾರವಾಗಿದೆ ಎಂದು ಕಂಡುಬಂದರೆ ಅಂತಹ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ವರದಿಯನ್ನು ತರಿಸುವ ಬಗ್ಗೆ ಇಲ್ಲಿ ಒಂದು ಸ್ಟೇಟ್‌ಮೆಂಟ್‌ನ್ನು ಕೊಡಿ.

ಶ್ರೀ ಉಮೇಶ್ ವಿ. ಕತ್ತಿ :— ವರದಿಯನ್ನು ಮಂಗಳವಾರದೊಳಗಾಗಿ ತರಿಸುವಂತಹ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಅಧ್ಯಕ್ಷರು :— ಡಾ: ಎಂ.ಪಿ. ಕರ್ಕಿಯವರೇ, ನಾನು ತಮಗೆ ನಾಳೇ ಉತ್ತರವನ್ನು ತರಿಸಿಕೊಡುತ್ತೇನೆ.

(ಪ) ಚಾಮರಾಜನಗರ ಪುಣಜನೂರು ರಸ್ತೆ ದುರಸ್ತಿ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ, ನಾನು ಬಹಳ ದಿನಗಳಿಂದ ಚಾಮರಾಜನಗರ - ಪುಣಜನೂರು ರಸ್ತೆಯ ಬಗ್ಗೆ ಸುಮಾರು ಒಂದೂವರೆ ವರ್ಷದಿಂದ ಹೋರಾಟ ಮಾಡುತ್ತಾ ಬಂದಿದ್ದೇನೆ. ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳಿಗೂ ಸಹ ಗೊತ್ತು. ತಾವೂ ಸಹ ಒಂದು ಸಮಾರಂಭಕ್ಕೆ ಬಂದು ಈ ರಸ್ತೆ ಇಷ್ಟೊಂದು ಹದಗೆಟ್ಟಿದೆ ಎಂದು ನೀವು ಮಾತನಾಡಿದ್ದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಬಗ್ಗೆ ಒಂದೂವರೇ ವರ್ಷದಿಂದ ಸಂಬಂಧಪಟ್ಟ ಹಿಂದಿನ ಲೋಕೋಪಯೋಗಿ

ಸಚಿವರ ಕಾರ್ಯಾಲಯಕ್ಕೂ ಬೀಗ ಹಾಕಿ ಪ್ರತಿಭಟನೆಯನ್ನೂ ಸಹ ಮಾಡಿದ್ದೆ. ನನಗೆ ಅವರಿಗೆ ಅಪಮಾನ ಮಾಡಬೇಕೆಂಬ ಉದ್ದೇಶವೇನಿಲ್ಲ. ಒಂದು ಪ್ರತಿಭಟನಾ ರೂಪದಲ್ಲಿ ನಾನು ಅದನ್ನು ಮಾಡಿದ್ದೆ. ಆ ರಸ್ತೆ ಬಹಳ ಸೂಕ್ಷ್ಮವಾದಂತಹ ಸ್ಥಳ. ಎಸ್.ಟಿ.ಎಫ್.ನವರು ಓಡಾಡುವಂತಹ ಸ್ಥಳವಾಗಿದೆ. ಅದಕ್ಕೆ ಒಂದು ವಿಶೇಷವಾದಂತಹ ಯೋಜನೆಯನ್ನು ತಾವು ಮಾಡಬೇಕು. ಆ ರಸ್ತೆಯ ರಪೇರಿಯ ಬಗ್ಗೆ ವಿಶೇಷವಾದ ಅನುದಾನವನ್ನು ಸಹ ಕೊಡಬೇಕು. ಸುಮಾರು ಒಂದೂವರೆ ವರ್ಷದಿಂದ ಈ ರಸ್ತೆಯನ್ನು ರಿಪೇರಿ ಮಾಡದೆ ಕಡೆಗಣಿಸಿದ್ದಾರೆ. ಈ ರಸ್ತೆಯೂ ತಮಿಳುನಾಡಿನಿಂದ ಕರ್ನಾಟಕಕ್ಕೆ ಸಂಪರ್ಕವಿರುವಂತಹ ರಸ್ತೆ ಇದು. ಈ ರಸ್ತೆಯಲ್ಲಿ ಕನಿಷ್ಟ ಒಂದು ದಿನದಲ್ಲಿ 10ರಿಂದ 25 ಸಾವಿರದವರೆಗೆ ಲಾರಿಗಳು, ವಾಹನಗಳು ಓಡಾಡುತ್ತವೆ. ಆ ತಮಿಳುನಾಡಿನಿಂದ ಉತ್ತಮವಾದ ರಸ್ತೆಯಿಂದ ಬಂದಂತಹ ಜನರು ಈ ಗಡಿನಾಡಿಗೆ ಬಂದ ನಂತರ ಏನು ಕರ್ನಾಟಕ ಪರಿಸ್ಥಿತಿ ಈ ರಸ್ತೆಯ ಹಣೆಬರಹ ಈ ರೀತಿಯಾಗಿದೆ ಎಂದು ಹೇಳುವುದು ಒಂದು ಕಡೆ. ಮತ್ತೊಂದು ಕಡೆ ಎಂದರೆ ವಾಟಾಳ್ ನಾಗರಾಜ್‌ರವರು ಇಷ್ಟೊಂದು ಹೋರಾಟ ಮಾಡುತ್ತಿದ್ದಾರೆ ಇದೇನು ಈ ರಸ್ತೆಯನ್ನು ಹೀಗೆ ಇಟ್ಟುಕೊಂಡಿದ್ದಾರೆ ಎಂದು ಆಡಿಕೊಳ್ಳುತ್ತಿದ್ದಾರೆ ಅಷ್ಟೆ ಅಲ್ಲ ನನಗೂ ಯಾವ ಯಾವ ಭಾಷೆಯಲ್ಲಿ ಬೈದಿದ್ದಾರೆ ಎಂದು ಹೇಳಿದರೆ ಸಂಸದೀಯ ವ್ಯವಸ್ಥೆಯಲ್ಲಿ ಇಲ್ಲದಿರುವಂತಹ ಎಲ್ಲಾ ಭಾಷೆಗಳಲ್ಲೂ ಸಹ ನಾನು ಪ್ರಾಮಾಣಿಕನಾಗಿ ಬೈಸಿಕೊಂಡಿದ್ದೇನೆ. ಅದರಲ್ಲಿ ಏನೂ ಅನುಮಾನವಿಲ್ಲ. ತಾವು ನಮಗೆ ಆ ಭಾಷೆಗಳಲ್ಲಿ ಹೇಳಿ ಎಂದರೆ ನಾನು ಹೇಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ :— ಮಾನ್ಯ ವಾಟಾಳ್‌ನಾಗರಾಜ್‌ರವರು ಬೈಸಿಕೊಳ್ಳುತ್ತಾರೆಂದರೆ ನೀವು ನಂಬುತ್ತೀರಾ?

ಅಧ್ಯಕ್ಷರು :— ಅವರ್ಯಾರೋ ಪುಣ್ಯಾತ್ಮರುಗಳಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು.

ಶ್ರೀ ಹೆಚ್.ಎನ್. ನಂಜೇಗೌಡ :— ಮಾನ್ಯ ವಾಟಾಳ್‌ನಾಗರಾಜ್‌ರವರಿಗೆ ಬೈದವರು ಉಳಿದುಕೊಳ್ಳುತ್ತಾರಾ?

ಶ್ರೀ ವಾಟಾಳ್ ನಾಗರಾಜ್:— ಇಲ್ಲಾ, ಅಧ್ಯಕ್ಷರು ಏನು ಹೇಳುತ್ತಾರೆ ಕೇಳಿ. ನಿಮ್ಮನ್ನು ಬೈದವರಿಗೆಲ್ಲಾ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆಂದು ಹೇಳಿದರೆ ನನ್ನ ಹಣೆಬರಹ ಏನಾಯಿತು?

ಅಧ್ಯಕ್ಷರು :— ಇನ್ನೇನು ಮಾಡುವುದು? ನಾನು ಬೈಯುವ ಹಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:— ನಾನು ಜಾಸ್ತಿ ಮಾತನಾಡಲು ಹೊರಟರೆ ಜಾಸ್ತಿ ಮಾತನಾಡುತ್ತೀರಿ ಎಂದು ಹೇಳುತ್ತೀರಿ. ಇಲ್ಲ ತೀರಾ ಮುಂದಕ್ಕೆ ಹೋದರೆ ಮುಂದಿನ ಬೆಂಚಿನವರು ಎಂದು ಹೇಳುತ್ತೀರಿ. ನಾನು ವಿಧಿಯಿಲ್ಲದೆ ಮೌನವಾಗಿ ಇಡೀ ದಿನ ನಾನು ಧರಣಿ ಮಾಡುತ್ತೇನೆ. ನನ್ನನ್ನು ತಾವು ಮೇಲೆ ಏಳಿ ಎಂದು ಹೇಳಬೇಡಿ. ಇದು ನನಗೆ ಪ್ರಾಯಶ್ಚಿತವಾಗಲಿ.

(ಈ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಹೂಡಲು ಸದನದ ಬಾವಿಗೆ ಬಂದರು)

ಅಧ್ಯಕ್ಷರು :— ಮಾನ್ಯ ಮಂತ್ರಿಗಳೆ, ನೀವು ಅಪೀಲ್ ಮಾಡಿಕೊಳ್ಳಿ.

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :— ಮಾನ್ಯ ವಾಟಾಳ್ ನಾಗರಾಜ್‌ರವರು ರಸ್ತೆಯ ರಿಪೇರಿಯ ಬಗ್ಗೆ ಸಾಕಷ್ಟು ಸಲ ಒತ್ತಾಯ ಮಾಡಿದ್ದಾರೆ ನಾಳೆ ಇದರ ಬಗ್ಗೆ ವರದಿಯನ್ನು ತರಿಸಿ ತಮಗೆ ಮಾಹಿತಿಯನ್ನು ನೀಡುತ್ತೇನೆ. ರಸ್ತೆಯನ್ನು ಪೂರ್ತಿ ಮಾಡಲು ನಾವಿಬ್ಬರೂ ಚರ್ಚೆ ಮಾಡಿ ಯಾವ ರೀತಿ ಕೆಲಸ ಮಾಡಬೇಕು ಎಂಬ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಜೂನ್ ತಿಂಗಳೊಳಗಾಗಿ ಆ ಕೆಲಸವನ್ನು ಮಾಡಿಸುತ್ತೇನೆ ಎಂದು ಅಧ್ಯಕ್ಷರ ಮುಖೇನ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು :— ಈ ಬಗ್ಗೆ ವಿಶೇಷವಾಗಿ ಸಭಾನಾಯಕರೇ ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ವಾಟಾಳ್ ನಾಗರಾಜ್‌ರವರು ಮೌನವಾಗಿ ಪ್ರಾಯಶ್ಚಿತ ಮಾಡಿಕೊಳ್ಳುತ್ತೇನೆಂದು ಹೋಗಿ ಸದನದ ಬಾವಿಯಲ್ಲಿ ಭಾಷಣ ಮಾಡುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜರವರು ಸದನದ ಬಾವಿಯೊಳಗೆ ಏಕೆ ಬಂದು ಕುಳಿತುಕೊಂಡರು ಎಂಬುದು ನನಗೆ ಗೊತ್ತಾಗಲಿಲ್ಲ. ರಸ್ತೆಯನ್ನು ರಿಪೇರಿ ಮಾಡಿಸಬೇಕು ಎಂದು ಕೇಳುತ್ತಿದ್ದರು. ಇದ್ದಕಿದ್ದಹಾಗೇ ಈ ಸದನದ ಬಾವಿಗೆ ಏಕೆ ಬಂದರು?

(ವಾಟಾಳ್ ನಾಗರಾಜ್‌ರವರು ವೆಲ್‌ನಿಂದ ಮಾತನಾಡಿದರು)

ಅಧ್ಯಕ್ಷರು :— ಮುಖ್ಯಮಂತ್ರಿಯವರು ಅವರ ಊರಿನ ರಸ್ತೆಯು ಚೆನ್ನಾಗಿಲ್ಲವೆಂದು ಅವರ ಊರಿಗೇ ಹೋಗುವುದಿಲ್ಲ. ಅವರು ನಿಮ್ಮ ಊರಿಗೆ ಏಕೆ ಬರುತ್ತಾರೆ?

ಶ್ರೀ ಎನ್.ಎಂ. ನಬಿ :— ರಸ್ತೆ ರಿಪೇರಿ ಆಗಬೇಕಾದರೆ ಎಲ್ಲರೂ ಈ ರೀತಿ ಧರಣಿ ಮಾಡಿದರೆ ರಸ್ತೆಯನ್ನು ರಿಪೇರಿ ಮಾಡಿಸುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸದನದ ಹಿರಿಯ ಸದಸ್ಯರಾಗಿದ್ದು ಸಾಕಷ್ಟು ಅನುಭವವುಳ್ಳವರಾಗಿರುತ್ತಾರೆ. ಇಂತಹ ವಿಷಯಗಳ ಬಗ್ಗೆ ನನ್ನ ಹತ್ತಿರ ಮಾತನಾಡಬಹುದು, ಸಿದ್ಧರಾಮಯ್ಯನವರ ಹತ್ತಿರ ಮಾತನಾಡಬಹುದು, ಸಂಬಂಧಪಟ್ಟ ಸಚಿವರ ಹತ್ತಿರ ಮಾತನಾಡಬಹುದು ಈ ರೀತಿಯಾಗಿ ಧರಣಿಯನ್ನು ಕುಳಿತರೆ ಸಮಸ್ಯೆಯು ಬಗೆಹರಿಯುತ್ತದೆಯೇ?

TA 39-48

12.40 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ :— ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ತಾವು ತಮ್ಮ ಸೀಟಿಗೆ ಹೋಗಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ನಿಜವಾಗಲೂ ಅವರು ಹೇಳುವುದು ಸರಿ. ನಾನು ಕೊಳ್ಳೇಗಾಲ ಮತ್ತು ಚಾಮರಾಜನಗರ ಅಲ್ಲಿಗೆ ಹೋಗಿದ್ದೆ. ರಸ್ತೆಗಳು ಬಹಳಷ್ಟು ಕೆಟ್ಟಿವೆ. ಮೂರು ಜನ ಕೂಡಿ, ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು ವಾಟಾಳ್ ನಾಗರಾಜ್‌ರವರು ಮಹದೇಶ್ವರ ಬೆಟ್ಟದಲ್ಲಿ ಅಡ್ಡಾಡಿ ಬರಲಿ. ಅವರು ವೀರಪ್ಪನನ್ನು ಹಿಡಿದಹಾಗೆ ಆಗುತ್ತದೆ ರಸ್ತೆಯನ್ನು ನೋಡಿದಹಾಗೆ ಆಗುತ್ತದೆ. ಆಮೇಲೆ ಪ್ರಸ್ತಾಪ ಮಾಡಿದರೆ ತಾವು ಒಪ್ಪಿಗೆ ಕೊಟ್ಟಹಾಗೆ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ :— ವೀರಪ್ಪನಿರುವ ಕಡೆ ನಾವು ಬಹಳಷ್ಟು ಸಲ ಹೋಗಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಹೋಗಿ ನೋಡಿಕೊಂಡು ಬರಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಹೋಗಿದ್ದೇನೆ ಅದಕ್ಕಾಗಿ ಹೇಳುತ್ತಿದ್ದೇನೆ. ಆ ಬಾರ್ಡರ್‌ಗೆ ಹೋಗಿ ಸ್ವತಹಃ ನೋಡಿದ್ದೇನೆ.

ಅಧ್ಯಕ್ಷರು :— ಪೋಲೀಸರ ಕೈಯಲ್ಲಿ ವೀರಪ್ಪನನ್ನು ಹಿಡಿಯಲಿಕ್ಕೆ ಆಗಲಿಲ್ಲ. ನಾನು ಎಲ್ಲಾ ಪಾರ್ಟಿಯವರದ್ದು ಒಂದೊಂದು ಟೀಮ್ ಮಾಡಿ ನಾನೇ ಕಳುಹಿಸುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ವೆಲ್‌ನಿಂದಲೇ ಮಾತನಾಡುತ್ತಿದ್ದರು)

ಶ್ರೀ ಉಮೇಶ್ ವಿ. ಕತ್ತಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಏನು ಹೇಳುತ್ತಿದ್ದಾರೆ ಪುಣಜನೂರು ಮತ್ತು ಚಾಮರಾಜನಗರ ರಸ್ತೆ ಕೆಟ್ಟಿದೆ ಅದು ಸರ್ಕಾರದ ಗಮನಕ್ಕೆ ಬಂದಿದೆ. ಕೂಡಲೇ ಅದರ ಬಗ್ಗೆ ಸಭೆ ಮಾಡಿ ಯಾವ ರೀತಿಯಾಗಿ ಜೂನ್‌ದೊಳಗೆ ಆ ಕೆಲಸ ಮುಗಿಸಬೇಕೆನ್ನುವ ತೀರ್ಮಾನಕ್ಕೆ ಮಾವು ನೀವು ಕೂಡಿ ಬರೋಣ ಎಂದು ಹೇಳಿ ತಮ್ಮ ಮುಖಾಂತರ ತಿಳಿಸುತ್ತೇನೆ. ಮಾನ್ಯ ಸದಸ್ಯರು ಧರಣಿ ಬಿಟ್ಟು ತಮ್ಮ ಸೀಟಿಗೆ ಹೋಗಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

(ಫ) ಹುಣಸೂರು ಕ್ಷೇತ್ರದಲ್ಲಿನ ಹೊಗೆಸೊಪ್ಪು ಬೆಳೆಗಾರರ ಸಮಸ್ಯೆ

+ ಶ್ರೀ ಜಿ.ಟಿ. ದೇವೇಗೌಡ (ಹುಣಸೂರು) :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಹೊಗೆಸೊಪ್ಪಿನ ಬೆಳೆಗಾರರ ಜೀವನ್ಮರಣದ ಪ್ರಶ್ನೆಯಿದೆ. ಅದನ್ನು ತಮ್ಮ ಗಮನಕ್ಕೆ ತಂದಾಗ, ಅದರ ಬಗ್ಗೆ ಪ್ರಸ್ತಾಪ ಮಾಡಲು ತಾವು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ನಮ್ಮ ಬಡ ರೈತರ ಪರವಾಗಿ ತಮಗೆ ಹೃದಯಪೂರ್ವಕ ಕೃತಜ್ಞತೆಗಳನ್ನು